ಅಸಲು ದಾವಾ 96/2016 ಡಿ ಡಬ್ಲ್ಯೂ ಃ 1 -ಶಾರದಮ್ಮ

<u>ಸಾಕ್ಷಿಯನ್ನು ದಿನಾಂಕಃ **24.06.2023** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ **3** ರವರ ಪರಃ ಶ್ರೀ ಎಂ ಜೆ ವಕೀಲರಿಂದಃ</u>

2. ನಾನು 3 ನೇ ಎದುರುದಾರರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡಿದ್ದೇನೆ. ಅವರು ಪ್ರಸ್ತಾಪಿಸಿರುವ ದಾಖಲೆಗಳನ್ನು ನಾನು ಪಡೆದಿದ್ದೇನೆ. ಸದರಿ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದೇನೆ. 5-6 ವರ್ಷದಿಂದ ನನ್ನ ತಾಯಿ ಅಂದರೆ 1 ನೇ ಪ್ರತಿವಾದಿ ನನ್ನ ಜೊತೆ ಇದ್ದಾರೆ. ದಾಖಲೆಗಳನ್ನು ನಾನು ಓದಿ ತಿಳಿದುಕೊಂಡ ವಿಚಾರಗಳನ್ನು ನಮ್ಮ ತಾಯಿಗೆ ಹೇಳಿದ್ದೇನೆ. ನನ್ನ ತಾಯಿ ದೈನಂದಿನ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ಕಣ್ಣು ಸರಿಯಾಗಿ ಕಾಣುತ್ತದೆ ಮತ್ತು ಕಿವಿ ಕೇಳಿಸುತ್ತದೆ ಎಂದರೆ ಸಾಕ್ಷಿದಾರರು ಇತ್ತೀಚೆಗೆ ಕಡಿಮೆಯಾಗಿರುತ್ತದೆ ಎನ್ನುತ್ತಾರೆ. ಗಟ್ಟಿಯಾಗಿ ಕೇಳಿದರೆ ಕೇಳಿಸುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎದುರಿಗೆ ಬಂದ ವ್ಯಕ್ತಿಗಳನ್ನು ಗುರುತಿಸುತ್ತಾರೆ ಎಂದರೆ ಸಾಕ್ಷಿದಾರರು ಕೆಲವರನ್ನು ಗುರುತಿಸಿರುತ್ತಾರೆ ಕೆಲವರನ್ನು ಗುರುತಿಸುವುದಿಲ್ಲ ಎನ್ನುತ್ತಾರೆ. ನಮ್ಮ ತಾಯಿ ಈ ದಾವೆಯನ್ನು ಹೊರತು ಪಡಿಸಿ ಪ್ರತಿವಾದಿ 3 ತಂದೆ ರವರ ಮೇಲೆ ಯಾವುದೇ ದಾವೆ ಮಾಡಿರುವುದಿಲ್ಲ.

3. ನಾನು ದಾವಾ ಆಸ್ತಿಯ ಕಂದಾಯ ದಾಖಲೆಗಳನ್ನು ಪಡೆದಿದ್ದೇನೆ. ನಾವು ಕಂದಾಯವನ್ನು ಸರ್ಕಾರಕ್ಕೆ ಕಟ್ಟಿದ್ದೇವೆ. ಈ ಸಂಬಂದ ದಾಖಲೆಗಳು ಇರುತ್ತವೆ. ಅವುಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಕಂದಾಯ ದಾಖಲೆಗಳನ್ನು ಪ್ರಶ್ನೆ ಮಾಡಿ ನಾವು ಕೇಸು ದಾಖಲು ಮಾಡಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಚಕ್ಕು ಬಂದಿ ಗೊತ್ತಿಲ್ಲ. ಸಾಕ್ಷಿ ಎಷ್ಟು ಐಟಂ ಗಳು ಇವೆ ಎಂದು ನನಗೆ ಗೊತ್ತಿದೆ ಎನ್ನುತ್ತಾರೆ. ನನ್ನ ತಾಯಿ ಮತ್ತು ನನ್ನ ಸಹೋದರಿ ಹಾಗೂ ನಾನೂ ಯಾವತ್ತೂ ಕೂಡ ದಾವಾ ಆಸ್ತಿಗಳ ಸ್ವಾಧೀನತೆಯಲ್ಲಿ ಇಲ್ಲದ ಕಾರಣ ಸರ್ವೆ ನಂಬರ್ ಮತ್ತು ಚಕ್ಕುಬಂದಿಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಯವರು ಮಾರಾಟ ಮಾಡಿದ್ದ ಆಸ್ತಿಗಳ

ವಿವರಗಳನ್ನು ಮುಚ್ಚಿಟ್ಟು ನಾನು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ನಂತರ ನಾನು ಅದಕ್ಕೆ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಸಹೋದರಿ ಕಮಲಮ್ಮನಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.ನಾನು ನನ್ನ ತಾಯಿ ಮತ್ತು ನನ್ನ ಸಹೋದರಿ ಶಾಮೀಲಾಗಿ ಪ್ರತಿವಾದಿ 3 ರವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

4. ವಾದಿ ಏನು ಸಾಕ್ಷಿ ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ನಂತರ ನಾನು , ನನ್ನ ತಾಯಿ ಮತ್ತು ವಾದಿ ಮಾತನಾಡಿದ್ದೇವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರಿ ನನ್ನ ತಾಯಿಯನ್ನು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ತಿಳಿದು ಅವರನ್ನು ನ್ಯಾಯಾಲಯಕ್ಕೆ ಬರದಂತೆ ದೂರು ಇಟ್ಟಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮಾಡಿದ ಸಾಲವನ್ನು ನಾನು ಹಾಗೂ ನನ್ನ ಸಹೋದರಿ ತೀರುವಳಿ ಮಾಡಿದ್ದೇವೆ. ಇದರ ಬಗ್ಗೆ ಕೂಡ ದಾಖಲೆಗಳು ನನ್ನ ಬಳಿ ಇವೆ. ಆ ವಿಚಾರವನ್ನು ತಕರಾರಿನಲ್ಲಿ ಬರೆಸಲು ಯಾವುದೇ ತೊಂದರೆ ಇರಲಿಲ್ಲ. ಶಿವಪುರ ಗ್ರಾಮದ ಕೃಷ್ಣಪ್ಪನವರ ಪರಿಚಯ ನನಗೆ ಇದ್ದು ಅವರು ನನ್ನ ಚಿಕ್ಕಪ್ಪ. ಅವರ ಕುಟುಂಬದ ಸದಸ್ಯರು ಇದ್ದಾರೆ. ಅವರನ್ನು ನಾನು ಬೇಟಿ ಮಾಡಿದ್ದೇನೆ. ಅವರ ಕುಟುಂಬಕ್ಕೆ ಯಾವುದಾದರೂ ಸಾಲದ ತೀರುವಳಿ ಮಾಡಿದ್ದೀರೇ ಎಂದರೆ ಸಾಕ್ಷಿದಾರರು ನಮ್ಮ ತಾಯಿ ಯಾವುದೇ ಸಾಲ ಮಾಡಿರಲಿಲ್ಲ ಎನ್ನುತ್ತಾರೆ. ದಿಃ 14.05.1962 ರ ವ್ಯವಸ್ಥಾ ಪತ್ರದಲ್ಲಿ ಎಸ್ ಕೆ ಕೃಷ್ಣಪ್ಪ ರವರಿಗೆ ರೂ. 1,500/- ಸಾಲದ ತೀರುವಳಿಯ ಬಗ್ಗೆ ಉಲ್ಲೇಖ ಇರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. 3 ನೇ ಪ್ರತಿವಾದಿ ತಂದೆ ದಿಃ 04.02.1972 ರಂದು ಮಾಡಿದ ಮತ್ತೊಂದು ಕುಟುಂಬ ವ್ಯವಸ್ಥಾ ಪತ್ರದ ಬಗ್ಗೆ ಕೂಡ ನನಗೆ ತಿಳುವಳಿಕೆ ಇದೆ ಎಂದರೆ ಸರಿಯಲ್ಲ. ಶಿವಪುರದ ಬಿ ಆರ್ ಶ್ರೀನಿವಾಸ ಮೂರ್ತಿ ರವರ ಪರಿಚಯ ಇದೆ. ಅವರು ತೀರಿಕೊಂಡಿರುತ್ತಾರೆ. ಅವರ ಕುಟುಂಬದವರ ಪರಿಚಯ ಇದೆ. ಅವರ ಕುಟುಂಬದವರನ್ನು ಬೇಟಿ ಮಾಡಲು ನಾನು ಪ್ರಯತ್ನ ಮಾಡಿಲ್ಲ. ಬಿ ಆರ್ ಶ್ರೀನಿವಾಸ ಮೂರ್ತಿ ರವರಿಗೆ ಯಾವುದಾದರೂ ಸಾಲವನ್ನು ಮರು

ಪಾವತಿಸಿದ್ದೀರಾ ಎಂದರೆ ಸಾಕ್ಷಿದಾರರು ನಾವು ಯಾವತ್ತೂ ಸಾಲವನ್ನು ಮಾಡಿಲ್ಲ ಎನ್ನುತ್ತಾರೆ. ಸದರಿ ಸಾಲವನ್ನು ಕೂಡ 3 ನೇ ಪ್ರತಿವಾದಿ ತೀರುವಳಿ ಮಾಡಬೇಕೆಂಬ ವಿಚಾರ ಮೇಲೆ ಹೇಳಿದ ವ್ಯವಸ್ಥಾ ಪತ್ರದಲ್ಲಿ ಉಲ್ಲೇಖವಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಅದರಂತೆ 3 ನೇ ಪ್ರತಿವಾದಿ ಸಾಲ ತೀರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ವಿಚಾರ ನನಗೆ ನನ್ನ ತಾಯಿಗೆ ಹಾಗೂ ಸಹೋದರಿ ಗೊತ್ತಿದೆ ಎಂದರೆ ಸರಿಯಲ್ಲ. 1962 ರಿಂದ ನಮ್ಮ ತಾಯಿ ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇಲ್ಲವೆಂದರೆ ಸರಿಯಲ್ಲ. ಆದ್ದರಿಂದ ಅವುಗಳ ಯಾವುದೇ ವ್ಯವಹರಣೆ ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿಃ 16.05.1989 ರಲ್ಲಿ 3 ನೇ ಪ್ರತಿವಾದಿಯ ತಂದೆ ಬರೆದಿರುವ ಮರಣ ಶಾಸನದ ಬಗ್ಗೆ ಕೂಡ ನಮಗೆ ತಿಳುವಳಿಕೆ ಇದೆ ಎಂದರೆ ಸರಿಯಲ್ಲ. ಆದಾಗ್ಯೂ ಕೂಡ ಆ ವಿಚಾರವನ್ನು ಮುಚ್ಚಿಟ್ಟು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

4. ರಾಜು ಬಿನ್ ಎಂ ರಾಜು ರವರ ಪರಿಚಯ ನನಗೆ ಇದೆ. ಅವರನ್ನು ನಾನು ಬೇಟಿ ಮಾಡಿ ಮಾತನಾಡುವ ಪ್ರಸಂಗ ಬಂದಿಲ್ಲ. ಅವರ ಮತ್ತು 1 ನೇ ಪ್ರತಿವಾದಿಯ ನಡುವೆ ಅವರ ಆಸ್ತಿಗಳ ಬಗ್ಗೆ ಏನು ವ್ಯವಹರಣೆ ಆಗಿದೆ ಎಂಬ ಬಗ್ಗೆ ಗೊತ್ತಿಲ್ಲ. ಅದು ನಮ್ಮ ತಾಯಿಗೆ ಗೊತ್ತಿರುತ್ತದೆ. ಶ್ರೀಕಂಠಯ್ಯನ ಮಗ ರಾಜು ರವರ ಪರಿಚಯ ಇದೆ. ಅವರನ್ನು ಯಾವುದೇ ಆಸ್ತಿಯ ವಿಚಾರದಲ್ಲಿ ಬೇಟಿಯಾಗುವ ಸಂದರ್ಭ ಬಂದಿತ್ತಾ ಎಂದರೆ ಸಾಕ್ಷಿದಾರರು ಅದನ್ನೆಲ್ಲಾ ನನ್ನ ತಾಯಿಯೇ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಸದರಿ ಶ್ರೀಕಂಠಯ್ಯನ ಮಗ ರಾಜು ಹಾಗೂ ರಾಜು ಬಿನ್ ಎಂ ರಾಜು ರವರಿಗೆ ಆಸ್ತಿಗಳನ್ನು ಮಾರಾಟ ಮಾಡಿರುವ ಆಸ್ತಿಗಳನ್ನು ಸೇರಿಸದ ವಿಚಾರ ನನಗೆ ಗೊತ್ತಿದೆ. ಸುಳ್ಳು ಅಂಶಗಳನ್ನು ಪ್ರಸ್ತಾಪಿಸಿ ನಾನು ಮತ್ತು ನನ್ನ ತಾಯಿ ಹಾಗೂ ಸಹೋದರಿ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಆಸ್ತಿಗಳನ್ನು ಲಪಟಾಯಿಸುವ ದುರುದ್ದೇಶದಿಂದ ನನ್ನ ತಂಗಿ ಹಾಕಿರುವ ದಾವೆಗೆ ಸಹಾಯಕವಾಗಿ ತಕರಾರು ಹಾಗೂ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.